

ಕ್ರಿಯಾಶೀಲವಾಗುವುದಿಲ್ಲ. ಅವುಗಳಿಗೆ ಬೇಕೆನಿಸಿದಾಗ ಮಾತ್ರ ಕ್ರಿಯಾಶೀಲಗೊಳ್ಳುತ್ತವೆ. ಇಲ್ಲವಾದಲ್ಲಿ ಸುಮ್ಮನಿರುತ್ತವೆ.

ಜೀನ್ ತಂದೆ– ತಾಯಿಯಿಂದ ಮಗುವಿಗೆ ವರ್ಗಾವಣೆಗೊಳ್ಳುವಾಗ ಸಾಕಷ್ಟು ಗುಣ–ಲಕ್ಷಣಗಳನ್ನು ತಮ್ಮೊಂದಿಗೆ ಒಯ್ಯುತ್ತವೆ. ಮಗುವಿಗೆ ಜೀನ್ ವರ್ಗಾವಣೆಗೊಳ್ಳುತ್ತಿದ್ದಂತೆ ವಂಶವಾಹಿ ಸಂಕೇತಗಳು(ಲಾಕ್) ಮುಚ್ಚಿಕೊಳ್ಳುತ್ತವೆ. ಅಂದರೆ, ಭ್ರೂಣವು ವಿಕಾಸಗೊಳ್ಳುವುದಕ್ಕೆ ಮೊದಲೇ ವಂಶವಾಹಿಯ ಅಭಿವ್ಯಕ್ತಿ ಜೀನ್‌ಗಳಲ್ಲಿ 'ಲಾಕ್' ಆಗಿ ಬಿಡುತ್ತದೆ. ಇವುಗಳಲ್ಲಿನ ರಹಸ್ಯ ಸಂಕೇತಗಳು ಮತ್ತು ಗುಣಲಕ್ಷಣಗಳ ಮಾಹಿತಿಗಳು ಪದರ ಪದರವಾಗಿರುತ್ತವೆ, ಜೋಡಿಸಿಟ್ಟಂತೆ ಇರುತ್ತವೆ. ವಂಶವಾಹಿಯ ರಹಸ್ಯ ಸಂಕೇತಗಳು ಮತ್ತು ಮಾಹಿತಿ ಅಗತ್ಯವಿದ್ದಾಗ ಮಾತ್ರ ಚಿಪ್ಪಿನಿಂದ ಅನಾವರಣಗೊಳ್ಳುತ್ತದೆ. ಇಲ್ಲದಿದ್ದರೆ, ಅವು ಪ್ರಕಟಗೊಳ್ಳುವುದೇ ಇಲ್ಲ!

ಮತ್ತೊಂದು ಅಚ್ಚರಿಯ ಸಂಗತಿ ಎಂದರೆ, ಸಂತೋಷದ ವಾತಾವರಣ, ಉತ್ತಮ ಆಹಾರ ಸೇವನೆ, ವ್ಯಾಯಾಮದಿಂದಾಗಿ ಯಾವುದೇ ವ್ಯಕ್ತಿಯ ಜೀನ್‌ನ ವರ್ಣತಂತುಗಳಲ್ಲಿರುವ ರಾಸಾಯನಿಕ ಮೊನೆಯು ಆನ್– ಆಫ್ ಆದಂತೆ ಚಲನೆ ಆಗುತ್ತದೆ. ಈ ಮಹತ್ವದ ಅಂಶವನ್ನು ವಿಜ್ಞಾನಿಗಳು ಜಂತು ಹುಳುವಿನ ಜೀನ್‌ನಲ್ಲಿ ಪತ್ತೆ ಮಾಡಿದ್ದರು. ಈ ಕ್ರಿಯೆಯಿಂದಾಗಿ ಜಂತು ಹುಳುವಿನ ಜೀವಿತಾವಧಿ ಎರಡರಿಂದ ಮೂರು ವಾರಗಳು ಹೆಚ್ಚಾಗಿದ್ದವು. ಅಂದರೆ, ಜಂತುಹುಳು ತನ್ನ ಜೀವಿತಾವಧಿಗಿಂತ ಶೇ 30ರಷ್ಟು ಹೆಚ್ಚು ಕಾಲ ಬದುಕಿತ್ತು. ಜೀವಿಗಳು ಎಷ್ಟೇ ಶಕ್ತಿಶಾಲಿ ಅಥವಾ ಬುದ್ಧಿಮತ್ತೆ ಹೊಂದಿದ್ದರೂ ತಮ್ಮೊಳಗಿನ ರಹಸ್ಯ ಜಗತ್ತನ್ನು ನಿಯಂತ್ರಿಸಲು ಸಾಧ್ಯವಾಗದು.

ಜೀನ್‌ನಲ್ಲಿರುವ ಇಂತಹ ಸಂಕೀರ್ಣ ವ್ಯವಸ್ಥೆಯು ವ್ಯಕ್ತಿಯ ಆರೋಗ್ಯ, ನಡವಳಿಕೆ ಮೇಲೆ ಬೀರುವ ಪರಿಣಾಮಗಳ ಅಧ್ಯಯನ ನಡೆಸುವುದು ಹುಡುಗಾಟದ ವಿಷಯವಲ್ಲ. ಸೂಕ್ಷ್ಮ ಬದಲಾವಣೆ ಮಾಡುವುದರಿಂದ ಅಥವಾ ದೋಷವನ್ನು ತೆಗೆದು ಹಾಕುವುದರಿಂದ ಆಗುವ ಸಕಾರಾತ್ಮಕ ಮತ್ತು ನಕಾರಾತ್ಮಕ ಪರಿಣಾಮ ಅರಿತುಕೊಳ್ಳುವ ಪ್ರಯತ್ನ ಜೀವ ವಿಜ್ಞಾನದಲ್ಲಿ ಮಹತ್ವದ ಘಟ್ಟ.

### ಜೀನ್ ಎಡಿಟ್ ಆದ ಟೊಮೆಟೊ

ಉತ್ತರ ಗೋಳದ ದೇಶಗಳಲ್ಲಿ ಹಗಲು ದೀರ್ಘವಾಗಿದ್ದು ರಾತ್ರಿಯ ಅವಧಿ ಸಣ್ಣದು. ಮೇಲಾಗಿ ವಿಪರೀತ ಚಳಿ. ಇಲ್ಲಿ ಕೃಷಿ ಅಷ್ಟು ಸುಲಭವಲ್ಲ. ವಿಶೇಷವಾಗಿ ಇಲ್ಲಿ ಟೊಮೆಟೊ ಗಿಡ ಬೆಳೆದು ಫಲ ನೀಡುವಾಗ ಬಹಳ ದಿನಗಳೇ ಬೇಕಾಗುತ್ತವೆ. ಈ ಕಾರಣಕ್ಕೆ ಇಲ್ಲಿ ಅತಿ ಬೇಗನೆ ಟೊಮೆಟೊ ನೀಡುವ ತಳಿ ಅಭಿವೃದ್ಧಿ ಪಡಿಸಲು ವಿಜ್ಞಾನಿಗಳು ಮೊರೆ ಹೋಗಿದ್ದು ಜೀನ್ ಎಡಿಟಿಂಗ್‌ಗೆ.

ಒಂದು ಕಾಲದಲ್ಲಿ ಕಾಡು ಹಣ್ಣಾಗಿದ್ದ ಟೊಮೆಟೊ ಹಣ್ಣು ನಿರ್ದಿಷ್ಟ ಗಾತ್ರ, ಬಣ್ಣ, ಸ್ವಾದ ಪಡೆಯಲು ಸಾವಿರಾರು ವರ್ಷಗಳಿಂದ ರೈತರು ಕಾಲಾನುಕಾಲಕ್ಕೆ ಹೊಲಗಳಲ್ಲಿ ನಡೆಸಿದ ಪ್ರಯೋಗಗಳೇ ಕಾರಣ. ಈಗ ವಿಜ್ಞಾನಿಗಳು ಅತಿ ಕಡಿಮೆ ದಿನಗಳಲ್ಲಿ ಹೆಚ್ಚು ಫಲಗಳನ್ನು ನೀಡುವ ಆಕರ್ಷಕ ಸಸಿಗಳನ್ನು ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸಸ್ಯದಲ್ಲಿ ರೂಪಾಂತರಗೊಳ್ಳುವ ಜೀನ್ ಕೋಡ್‌ಗಳನ್ನು ಕತ್ತರಿಸಿ ತೆಗೆದಿದ್ದಾರೆ. ಇದರಿಂದಾಗಿ ಅತಿ ಬೇಗನೇ ಹೂವು ಬಿಟ್ಟು, ಕಾಯಿ ಕಟ್ಟಿ ಹಣ್ಣೂ ಆಗುತ್ತವೆ. ಸಾಮಾನ್ಯ ಟೊಮೆಟೊಗಳಿಗಿಂತ ಜೀನ್ ಎಡಿಟ್ ಆದ ಸಸಿಗಳಲ್ಲಿ ಎರಡರಿಂದ ಮೂರು ವಾರಗಳ ಮೊದಲೇ ರೈತನಿಗೆ ಫಲ ಸಿಗುತ್ತದೆ. ಅಮೆರಿಕದ ನ್ಯೂಯಾರ್ಕ್‌ನ ಕೋಲ್ಡ್ ಸ್ಪ್ರಿಂಗ್ ಹಾರ್ಬರ್ ಲ್ಯಾಬೊರೇಟರಿಯಲ್ಲಿ ಜೀನ್ ತಿದ್ದುಪಡಿ ಆಗಿದೆ.

ಕ್ರಿಸ್ಪ್ಪರ್ ಮೂಲಕ ವಂಶವಾಹಿ ತಿದ್ದುಪಡಿ ಮಾಡಿದ ಜೆಡ್. ಲಿಪ್ಮನ್ ಅವರು ಈ ಕುರಿತು 'ಕೃಷಿಯಲ್ಲಿ ಅತಿ ಬೇಗನೆ ಬೆಳೆ ಬೆಳೆಯುವುದಕ್ಕೆ ಇರುವ ವಂಶವಾಹಿ ಅಡ್ಡಿಗಳನ್ನು ನಿವಾರಿಸಿ, ಅಧಿಕ ಫಸಲು ಪಡೆಯುವಲ್ಲಿ ಜೀನ್




ಬದುಕೇ ಬರಡಾಗಿ ಸಮಸ್ಯೆಗಳೇ ಸುಳಿಯಾಗಿ ಸಂಭ್ರಮವೇ ಇಲ್ಲದೆ ಬದುಕಲ್ಲಿ ಸಂತಸ ತರಲು ನಿಮ್ಮ ಪಾಲಿಗೆ ತೆರೆದಿದೆ ಭರವಸೆಯ ಬಾಗಿಲು ಅದೇ

ಶ್ರೀಲಕ್ಷ್ಮೀ ನರಸಿಂಹ ಆಸ್ಟ್ರೋ ಸೆಂಟರ್

ಶಿರೋಮಣಿ ಪಂ|| ಪಾಂಡುರಂಗ ಜೋಷಿರವರು
ವಂಶ ಪಾರಂಪರ್ಯ ಜ್ಯೋತಿಷ್ಯರು

ಶತಮಾನದ ಇತಿಹಾಸದಲ್ಲಿ ಉದ್ದಕ್ಕೂ ಸಮಸ್ಯೆಗಳ ನಡುವೆ ಮನುಷ್ಯನಲ್ಲಿ ಭರವಸೆಯಾಗಿ ಉಳಿದಿದ್ದು ನಮ್ಮ ಜ್ಯೋತಿಷ್ಯ ಶಾಸ್ತ್ರ, ಅಂತ ಜ್ಯೋತಿಷ್ಯ ಶಾಸ್ತ್ರದ ಪ್ರಾವಿಣ್ಯತೆ ಪಡೆದ ಕೆಲವೇ ಪಂಡಿತರ ಸಾಲಲ್ಲಿ ನಮ್ಮ ಜ್ಯೋತಿಷ್ಯ ಪಂಡಿತರು ಹಲವಾರು ವರ್ಷಗಳಿಂದ ಎಲ್ಲರ ಸಮಸ್ಯೆಗಳಿಗೆ ನಿಖರ ಪರಿಹಾರ ನೀಡುತ್ತಿರುವರು.

ಇವರು ನಿಮ್ಮ ಜಾತಕ, ಹಸ್ತರೇಖೆ, ಮುಖಲಕ್ಷಣ ಸ್ವರತರಂಗಗಳ ಮುಖಾಂತರ ಸಂಪೂರ್ಣ ಭವಿಷ್ಯವನ್ನು ತಿಳಿಸುತ್ತಾರೆ. ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಆರೋಗ್ಯ ಮನೆಯಲ್ಲಿ ಕಿರಿಕಿರಿ ಮದುವೆಯಲ್ಲಿ ವಿಳಂಬ, ಸಂತಸದಲ್ಲಿ ತೊಂದರೆ ಸಾಲಬಾಧೆ, ಕೋರ್ಟ್ ಕಛೇರಿ, ಹಣಕಾಸಿನ ತೊಂದರೆ ಹಾಗೂ ನಿಮ್ಮ ಮನಸ್ಸಿನಲ್ಲಿ ಯಾವುದೇ ಗುಪ್ತಸಮಸ್ಯೆಗಳಿಗೆ ಶೀಘ್ರ ಪರಿಹಾರ ತಿಳಿಸುತ್ತಾರೆ.

ವಿಶೇಷ ಸೂಚನೆ: ಮದುವೆ ಸಾಲಾವಳಿ, ಮನೆಯ ವಾಸ್ತು, ಸ್ತ್ರೀಪುರುಷ ವಶೀಕರಣ, ಮಾಟ–ಮಂತ್ರಗಳಿಗೆ ವಿಶೇಷ ಶಾಸ್ತ್ರೋಕ್ತ ಪರಿಹಾರವನ್ನು ಶೀಘ್ರದಲ್ಲಿ ಸೂಚಿಸುತ್ತಾರೆ.

ಫೋನಿನ ಮೂಲಕ ನಿಮ್ಮ ಸಂದರ್ಶನವನ್ನು ಖಚಿತ ಪಡಿಸಿಕೊಳ್ಳಿ.
9663606675

ಮನೆವಿಳಾಸ: #409, 2ನೇ ಕ್ರಾಸ್, ಆರ್.ಟಿ.ನಗರ ಮೈನ್ ರೋಡ್, ಹೆಚ್.ಡಿ.ಎಫ್.ಸಿ ಬ್ಯಾಂಕ್ ಪಕ್ಕ, ವಿಷ್ಣುಗಾರ್ಡನ್ ಹೋಟೆಲ್ ಎದುರು, ಆರ್.ಟಿ.ನಗರ, ಬೆಂಗಳೂರು.